**ಅಸಲು ದಾವ ಸಂಖ್ಯೆಃ 245/2019**
**ಪಿ.ಡಬ್ಲೂ -1**

ದಿಃ 03-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀಮತಿ VRB ರವರಿಂದಃ-**

2. ನಾನು ವಾಘವಡೆ ಗ್ರಾಮದ ವಾಸಿ ಎಂದರೆ ಸರಿ. ಸರ್ವೆ ನಂಬರ 24 ವಾಘವಾಡೆ ಗ್ರಾಮದಲ್ಲಿ ಇದೆ ಎಂದರೆ ಸರಿ. 1 ನೇ ಪ್ರತಿವಾದಿಯು ಮಚ್ಚೆ ಗ್ರಾಮದಲ್ಲಿ ವಾಸಿಸುತ್ತಾರೆ. ಸರ್ವೆ ನಂಬರ 24 ರ ಮೂಲ ಮಾಲಿಕರ ಹೆಸರು ಗೋಖಲೆ ಎಂದಾಗಿದ್ದು ಪೂರ್ಣ ಹೆಸರು ನನಗೆ ಗೊತ್ತಿಲ್ಲ. ಸದರಿ ಗೋಖಲೆ ಅವರು ಎಲ್ಲಿ ವಾಸವಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 24 ರಲ್ಲಿ 80 ಎಕರೆ 13 ಗುಂಟೆ ವಿಸ್ತೀರ್ಣ ಇತ್ತು. ಈಗ ಸರ್ವೆ ನಂಬರ 24 ಗೋಖಲೆ ಅವರ ಕಬ್ಜೆಯಲ್ಲಿ ಇಲ್ಲ. ಈಗ ಸರ್ವೆ ನಂಬರ 24 ರಲ್ಲಿ ನಾನು ಕಬ್ಜೆಯಲ್ಲಿದ್ದೇನೆ

ಮತ್ತು ಸದರಿ ಸರ್ವೆ ನಂಬರ 24 ರಲ್ಲಿ ಕಬ್ಜೆಯಲ್ಲಿರುವ ಬೇರೆ ವ್ಯಕ್ತಿಗಳ ಹೆಸರನ್ನು ಹೇಳಬಲ್ಲೆ. ಸರ್ವೆ ನಂಬರ 24 ರಲ್ಲಿ ಇರುವ ಬೇರೆ ವ್ಯಕ್ತಿಗಳೆಂದರೆ ಚೆಲುವೆಟಕರ, ನಾನು, ಅನಗೋಳಕರ, ಪಾಟೀಲ. ಉಡಿಕೇರಿ ಮತ್ತು ಇನ್ನಿತರರು ಇರುತ್ತಾರೆ. ಸರ್ವೆ ನಂಬರ 24 ರಲ್ಲಿ ಇರುವ ಇನ್ನಿತರರ ಹೆಸರುಗಳು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂಬರ 24 ರ 80 ಎಕರೆ 13 ಗುಂಟೆಯಲ್ಲಿ ನೀವು 1 ಎಕರೆ ಕಬ್ಜೆಯನ್ನು ಹೊಂದಿರುತ್ತೀರಿ ಎಂದರೆ ಸಾಕ್ಷಿಯು ನಾನು 5 ಎಕರೆಯ ಕಬ್ಜೆಯನ್ನು ಹೊಂದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಒಬ್ಬನ ಹೆಸರಿನಲ್ಲಿ ಸರ್ವೆ ನಂಬರ 24 ರಲ್ಲಿ 5 ಎಕರೆ ಜಮೀನು ಇದೆ. ನನ್ನ ಹೆಸರಿನಲ್ಲಿರುವ ಸರ್ವೆ ನಂಬರ 24 ರಲ್ಲಿ 5 ಎಕರೆ ಜಮೀನಿಗೆ ಸಂಬಂಧಿಸಿದಂತೆ ಟ್ರಿಬುನಲಗೆ ಶ್ರೀಕಾಂತ ಕೊನಪ್ಪಾ ಪೂಜೇರಿ ಇವರು ಅರ್ಜಿ ನೀಡಿದ್ದರು. ಸದರಿ ಶ್ರೀಕಾಂತ ಕೊನಪ್ಪಾ ಪೂಜೇರಿ ಇವರಿಂದ ನಿಮಗೆ 5 ಎಕರೆ ಜಮೀನು ಹೇಗೆ ಬಂತು ಎಂದರೆ ಸದಾಶಿವ ಪಾಟೀಲರವರು ಸದರಿ ಜಮೀನನ್ನು ಖರೀದಿಸಿದ್ದರು ಎಂದು ನುಡಿಯುತ್ತಾರೆ. ಸದಾಶಿವ ಪಾಟೀಲರವರಿಂದ ನಾನು ಸದರಿ 5 ಎಕರೆಯನ್ನು ನನ್ನ ಹೆಸರಿಗೆ 2019 ರಲ್ಲಿ ಖರೀದಿಸಿರುತ್ತೇನೆ. ಸದರಿ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಬಹುದು. ನನ್ನ ಹೆಸರಿನ 5 ಎಕರೆ ಜಮೀನನ್ನು ಖರೀದಿಯ ಸಮಯದಲ್ಲಿ ಪೋಡಿಯನ್ನು ಮಾಡಲಾಗಿದೆ. ನನ್ನ ಹೆಸರಿನ 5 ಎಕರೆ ಜಮೀನಿನ ಪ್ರತ್ಯೇಕ ಉತಾರೆ ಇದ್ದು ಅದನ್ನು ಹಾಜರಪಡಿಸಬಹುದು. ನಾನು ಖರೀದಿಸಿದ ಜಮೀನಿನ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ಸರ್ವೆ ನಂಬರ 23, ಉತ್ತರಕ್ಕೆ-ಆರ ಕೆ ಪಾಟೀಲ ರವರ ಜಮೀನು, ದಕ್ಷಿಣಕ್ಕೆ-ಈ ಕೇಸಿನ ವಾದಿಯ ಜಮೀನು ಇದೆ.

3. ಇಪಿ-114/2017 ರಂತೆ ಅರ್ಜಿಯನ್ನು ದಾಖಲ ಮಾಡಿರುತ್ತೀರಿ ಎಂದರೆ ಸರಿ. ಸದರಿ ಇಪಿ 114/2017 ನ್ನು ಯಾರೂ ಯಾರ ವಿರುದ್ಧ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಸದರಿ ಕೇಸಿನಲ್ಲಿ ಯಾವ ಅರ್ಜಿಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೀರಿ ಎಂದರೆ ನನಗೆ ಗೊತ್ತೀಲ್ಲ. ಸದರಿ ಕೇಸಿನಲ್ಲಿ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ಯಾವ ಆಸ್ತಿಯ ಬಗ್ಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ನೀವು ಸದರಿ ಕೇಸಿನಲ್ಲಿ ಹಾಜರಾಗಿರುತ್ತೀರಿ ಎಂದರೆ ನಾನು ಹಾಜರ ಆಗಿರುವುದಿಲ್ಲ. ಇಪಿ 114/2017 ನ್ನು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಮತ್ತು ಅವರ ಮೂರು ಜನ ಮಕ್ಕಳ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಇಪಿ 114/2017 ನ್ನು ಟ್ರಿಬುನಲರವರು 1 ನೇ ಪ್ರತಿವಾದಿಗೆ ಮಾಡಿದ ಆದೇಶದ ಮೇರೆಗೆ ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಇಪಿ 114/2017 ನ್ನು ಓಎಸ ನಂಬರ 167/2007 ರ ಆದೇಶದ ಮೇರೆಗೆ ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಓಎಸ ನಂಬರ 167/2007 ರ ದಾವೆಯನ್ನು 2 ನೇ

ಪ್ರತಿವಾದಿಯು 1 ನೇ ಪ್ರತಿವಾದಿ ಮತ್ತು ಅವರ ಮೂರು ಜನ ಮಕ್ಕಳ ವಿರುದ್ಧ ಸಲ್ಲಿಸಿದ್ದರು ಎಂದರೆ ನನಗೆ 2019 ರಲ್ಲಿ ತಿಳಿದು ಬಂತು ಎಂದು ನುಡಿಯುತ್ತಾರೆ. ನಿಮಗೆ 2019 ರಲ್ಲಿ ತಿಳಿದು ಬಂದಂತೆ ಓಎಸ ನಂಬರ 167/2007 ರ ಆದೇಶವು ಯಾರ ಪರವಾಗಿ ಆಗಿರುತ್ತದೆ ಎಂದರೆ 2 ನೇ ಪ್ರತಿವಾದಿ ಪರ ಆಗಿರುತ್ತದೆ ಎಂದು ನುಡಿಯುತ್ತಾರೆ. ಓಎಸ ನಂಬರ 167/2007 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮೂರು ಜನ ಮಕ್ಕಳನ್ನು ಹೊರತು ಪಡಿಸಿ ಬೇರೆ ಯಾರೂ ಪಕ್ಷಗಾರರು ಇದ್ದರು ಎಂದರೆ ಈ ಕೇಸಿನ ಮೂರನೇ ಪ್ರತಿವಾದಿಯು ಸಹ ಸದರಿ ಕೇಸಿನಲ್ಲಿ ಪಕ್ಷಗಾರರಾಗಿದ್ದರು ಎಂದು ನುಡಿಯುತ್ತಾರೆ. ಈ ಕೇಸಿನ ಮೂರನೇ ಪ್ರತಿವಾದಿಯು ಓ ಎಸ ಸಂಖ್ಯೆ 167/2007 ಚಾಲ್ತಿಯಲ್ಲಿರುವಾಗ ಸದರಿ ಕೇಸಿನ ದಾವಾ ಆಸ್ತಿಯನ್ನು ಖರೀದಿಸಿದ್ದು ಸದರಿ ಮೂರನೇ ಪ್ರತಿವಾದಿಯ ಖರೀದಿ ಪತ್ರ ರದ್ದಾಗಿ ಆದೇಶವಾಗಿರುತ್ತದೆ ಎಂದರೆ ಸರಿ. ಓಎಸ ಸಂಖ್ಯೆ 167/2007 ರ ದಾವಾ ಆಸ್ತಿಯು ಸರ್ವೆ ನಂಬರ 24/1 ಪೈಕಿ 5 ಎಕರೆ ಇತ್ತು ಎಂದರೆ ನನಗೆ ಗೊತ್ತಿಲ್ಲ.

4. ಓಎಸ ಸಂಖ್ಯೆ 167/2007 ರಲ್ಲಿ ಲತೀಫಖಾನ ಅಮಿರಖಾನ ಪಠಾಣ ರವರ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಲತೀಫಖಾನ ಅಮಿರಖಾನ ಪಠಾಣ 1 ನೇ ಪ್ರತಿವಾದಿಯ ಜಿಪಿಎ ಎಂದು ಓಎಸ ಸಂಖ್ಯೆ 167/2007 ರಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನ ಮೂರನೇ ಪ್ರತಿವಾದಿ ಓಎಸ ಸಂಖ್ಯೆ 167/2007 ರ ದಾವಾ ಆಸ್ತಿಯನ್ನು ಖರೀದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಈ ಕೇಸಿನ ಮೂರನೇ ಪ್ರತಿವಾದಿಯು ಓಎಸಸಂಖ್ಯೆ 167/2007 ರ ದಾವಾ ಆಸ್ತಿಯನ್ನು ಖರೀದಿಸಿದಾಗ ಲತೀಫಖಾನ ಅಮಿರಖಾನ ಪಠಾಣ ರವರು ಖರೀದಿಯ ಬಗ್ಗೆ ಮಾತುಕತೆ ಮಾಡಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಓಎಸಸಂಖ್ಯೆ 167/2007 ರ ಮೂರನೇ ಪ್ರತಿವಾದಿಯ ವಿರುದ್ಧ ಆದೇಶವಾದ ನಂತರ ಆರಎ ಸಂಖ್ಯೆ 281/2016 ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆರಎ 281/2016 ವಜಾಗೊಂಡಿದ್ದು 2 ನೇ ಪ್ರತಿವಾದಿಯ ವಿರುದ್ಧ ಆದ ಆದೇಶ ಖಾಯಂ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರ ಎ 281/2016 ವಜಾಗೊಂಡ ನಂತರ 1 ನೇ ಪ್ರತಿವಾದಿಯು ಮೇಲ್ಮನವಿ ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ.

5. ಈಗ ಪ್ರಸ್ತುತ ನಾನು ಈಗ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. 11 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಆರಎ ನಂಬರ 2/2021 ನ್ನು ನೀವು ಸಲ್ಲಿಸಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯನ್ನು ನೀವು ಈ ಕೇಸಿನ ಪ್ರತಿವಾದಿಗಳು ಮತ್ತು 1 ನೇ ಪ್ರತಿವಾದಿಯ ಇಬ್ಬರು ಮಕ್ಕಳ ವಿರುದ್ಧ ಸಲ್ಲಿಸಿರುತ್ತೀರಿ ಎಂದರೆ ಸರಿ . ಸದರಿ

ಮೇಲ್ಮನವಿ 10-11-2021 ರಲ್ಲಿ ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಇನ್ನೊಂದು ಮೇಲ್ಮನವಿಯನ್ನು ಸಲ್ಲಿಸಿದ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಇಲ್ಲ . 11 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಆರ ಎ 96/2020 ನ್ನು ಸಲ್ಲಿಸಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆರಎ 96/2020 ನ್ನು ನೀವು ಈ ಕೇಸಿನ ಪ್ರತಿವಾದಿಗಳು ಮತ್ತು 1 ನೇ ಪ್ರತಿವಾದಿಯ ಇಬ್ಬರು ಮಕ್ಕಳ ವಿರುದ್ಧಚಿ ಸಲ್ಲಿಸಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ . ಸದರಿ ಕೇಸು ಈಗ ಚಾಲ್ತಿಯಲ್ಲಿದ್ದು ಅದರ ಮುಂದಿನ ಮುದ್ದತ ದಿನಾಂಕ ಈ ತಿಂಗಳ 7 ನೇ ತಾರೀಖನಂದು ಇದೆ ಎಂದು ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ ಎಲ್ಲ ಕೇಸುಗಳ ಬಗ್ಗೆ ನಿಮಗೆ ನಿಖರವಾಗಿ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತೀದ್ದಿರಿ ಎಂದರೆ ನನಗೆ ಗೊತ್ತಿರುವ ವಿಚಾರ ಗೊತ್ತಿದೆ ಎಂದು, ಗೊತ್ತಿಲ್ಲದೆ ಇರುವ ವಿಚಾರ ಇಲ್ಲ ಎಂದು ಹೇಳಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**